


# ಊರುಭಂಗ

– 37ನೇ ಪುಟದಿಂದ

ಅದೇನೇ ಇರಲಿ. ಕೋಟೆಯನ್ನು ಹುಡುಕುತ್ತಾ ಹಳೆಯ ಊರಿನ ಕಡೆಗೆ ಹೆಜ್ಜೆ ಹಾಕಿದೆ. ಮೊದಲಿಗೆ ಹೊಸಪೇಟೆ ಎದುರಾಯಿತು. ನಾವಿಲ್ಲಿದ್ದಾಗ ಇದು ಸಣ್ಣದಾಗಿ ರೂಪುಗೊಳ್ಳುತ್ತಿತ್ತು. ಈಗ ಬೃಹದಾಕಾರವಾಗಿ ಬೆಳೆದು ರಸ್ತೆಯ ಎರಡೂ ಬದಿ ಜಗಮಗಿಸುವ ಅಂಗಡಿಗಳಿಂದ ತುಂಬಿದೆ. ಅದರ ನಂತರ ಸಂತೇಪೇಟೆ. ಹಿಂದೆ ಸಂತೆ ನಡೆಯುತ್ತಿದ್ದ ಜಾಗ. ಅದರಲ್ಲಿ ಎಲೆಯಾಸರ, ಬೆಲ್ಲದಾಸರ, ಮಡಿಕೆಯಾಸರ, ಕುಂಕುಮದಾಸರಗಳು ಗ್ರಂಥಿಗೆ ಅಂಗಡಿಗಳು ಕಂಡು ಬಂದವು. ಜೊತೆಗೆ ಸಿಮೆಂಟು – ಕಬ್ಬಿಣದ ಅಂಗಡಿಗಳು ಹೊಸದಾಗಿ ತಲೆಯೆತ್ತಿದ್ದವು. ಹೆಸರಿಗೆ ಆಸರಗಳಿವೆಯೇ ಹೊರತು ನಿಜವಾಗಿ ಅವುಗಳ ವ್ಯಾಪಾರ – ವಹಿವಾಟುಗಳಿಲ್ಲ. ಕಾಯಿಲೆಯಾದಾಗ ನಾವು ಚಿಕಿತ್ಸೆಗೆ ಹೋಗುತ್ತಿದ್ದ ಅಳಲೆಕಾಯಿ ಪಂಡಿತರ ಶಾಪು ಅಲ್ಲೇ ಇತ್ತು. ಈಗ ಅದರ ಜಾಗದಲ್ಲಿ 'ಪಂಡಿತ್ ನರ್ಸಿಂಗ್ ಹೋಮ್' ಬೋರ್ಡು ರಾರಾಜಿಸುತ್ತಿತ್ತು. ಜನ ಗಿಜಿಗುಟ್ಟುತ್ತಿದ್ದರು. ಆ ಪಂಡಿತರ ಮಗನೂ ನಾನೂ ಸಹಪಾಠಿಗಳು. ಹಾಗಾಗಿ ವಿಚಾರಿಸಿದೆ. ಆ ಪಂಡಿತರ ಮೊಮ್ಮಗ ಅಂದರೆ ನನ್ನ ಸಹಪಾಠಿಯ ಮಗ, ದೇಶ ವಿದೇಶಗಳಲ್ಲಿ ಓದಿ ಇಲ್ಲಿ ಶಾಪು ತೆಗೆದಿದ್ದಾರೆ ಎಂದು ತಿಳಿದು ಬಂತು. ಸರಿ, ಅವರಿಗೆ ನನ್ನ ಪರಿಚಯವೆಲ್ಲಾ ಇರೋಲ್ಲ. ಅಲ್ಲದೆ ಅವರಿಗೆ 'ಅ' ಯಿಂದ 'ಳ' ವರೆಗೆ ಎಲ್ಲಾ ಕತೆ ಹೇಳಬೇಕು. ಜೊತೆಗೆ ಅವರಿಗೆ ವ್ಯವಧಾನವೂ ಇರೋಲ್ಲ ಅಂತ ಮುಂದೆ ಹೋಗಿ ಕೋಟೆಯ ಕಡೆ ತಿರುಗಿದೆ. ಕಾಲುಗಳು ಪರಿಚಿತ ಸ್ಥಳದಲ್ಲಿ ಹೆಜ್ಜೆಯಿಡುವಂತೆ ಓಡಾಡಿದವು. ನಾವು ಇದ್ದದ್ದು ಬಾಡಿಗೆ ಮನೆಯಲ್ಲಿ. ಆ ಜಾಗಕ್ಕೆ ಬಂದಾಗ ಕಾಲುಗಳು ಸ್ಥಗಿತಗೊಂಡವು. ಆದರೆ ಆ ಮಣ್ಣಿನ ಗೋಡೆಯ ನಾಡಹಂಚು ಹೊದಿಸಿದ ಮನೆಯ ಯಾವ ಅವಶೇಷಗಳೂ ಅಲ್ಲಿ ಲಭ್ಯವಿರಲಿಲ್ಲ. ನಾವಿದ್ದ ಮನೆ ಮತ್ತು ಪಕ್ಕದಲ್ಲಿದ್ದ ಮಾಲಿಕರ ಮನೆಗಳೆರಡನ್ನೂ ಕೊಂಡ ಒಬ್ಬ ವ್ಯಾಪಾರಿಗಳು ಮೂರು ಅಂತಸ್ತಿನ ಮನೆ ಕಟ್ಟಿದ್ದರು. ನಮ್ಮ ಮನೆಯ ಎದುರಿಗಿದ್ದ ಕೋಟೆ ಆಂಜನೇಯ ಸ್ವಾಮಿ ಗುಡಿಯೇ ಕಾಣಲಿಲ್ಲ. ಏಕೆಂದರೆ ಸುತ್ತ ಮಾರಾಟ ಮಳಿಗೆಗಳಿಂದ ಅಲಂಕೃತ ಗೊಂಡು ದೇವಸ್ಥಾನದ ಆದಾಯ ಮೂಲವಾಗಿ ಪರಿವರ್ತನೆಗೊಂಡು ಕೋಟೆ ಕಾಯುತ್ತಿದ್ದ ಆಂಜನೇಯ ಕಾಂಪ್ಲೆಕ್ಸ್ ಕಾಯುತ್ತ 'ಕಾಂಪ್ಲೆಕ್ಸ್' ಆಂಜನೇಯ ನಾಗಿ ಹೋಗಿದ್ದ. ನನಗೆ ಒಂದು ರೀತಿ ನಿರಾಸೆ, ವಿಷಾದ ಆವರಿಸಿಕೊಂಡಿತು. ನಮ್ಮ ಮನಸ್ಸಿನಲ್ಲಿ ನಾವು ವಾಸವಿದ್ದ, ನಡೆದಾಡಿದ ಮನೆ – ಜಾಗಗಳು ಹಾಗೆಯೇ ಅಚ್ಚುಗೊಂಡಿರುತ್ತವೆ. ಅವು ಶಾಶ್ವತ ಎಂಬುದು ನಮ್ಮ ಭಾವನೆಯಾಗಿರುತ್ತದೆ. ಆದರೆ ಕಾಲಸಂದಂತೆಲ್ಲ ಅವು ತಮ್ಮ ರೂಪವನ್ನು ಬದಲಾಯಿಸಿ ಕೊಳ್ಳುತ್ತಿರುತ್ತವೆ. ನಾವೂ ಹಾಗೆಯೇ ಅಲ್ಲವೇ? ಯಾವಾಗಲೋ ಹಿಂದೆ ನೋಡಿದ ಪುಟ್ಟ ಮಗುವನ್ನು ಇಪ್ಪತ್ತು ವರ್ಷಗಳ ನಂತರ ಯಾವುದೋ ಸಮಾರಂಭದಲ್ಲಿ ನೋಡಿದಾಗ, 'ಅಯ್ಯೋ ಇವನು ನಿನ್ನ ಮಗನೇನೆ? ಎಷ್ಟು ಬೆಳೆದಿದ್ದಾನೆ. ನಾನು ನೋಡಿದಾಗ ಇಷ್ಟೇ ಇಷ್ಟಿದ್ದ. ಗುರುತೇ ಸಿಗಲಿಲ್ಲ' ಅಂತ ಪ್ರತಿಕ್ರಿಯೆ ವ್ಯಕ್ತಪಡಿಸುತ್ತೇವೆ. ಆದರೆ ಆ ಮಗು ನಿಮಗೋಸ್ಕರ ಬೆಳವಣಿಗೆಯನ್ನು ಸ್ಥಗಿತಗೊಳಿಸಿಕೊಂಡಿರಲು ಸಾಧ್ಯವೇ? ಅದು ಪ್ರಬುದ್ಧ ಮಾನಕ್ಕೆ ಬಂದಂತೆ ವಯೋಮಾನವನ್ನನುಸರಿಸಿ ಬಾಹ್ಯಾಂತರಿಕ ಎತ್ತರ – ಗಾತ್ರಗಳನ್ನು ಪಡೆದುಕೋಬೇಡ್ವೆ ಅಂತ ಯೋಚಿಸುವುದಿಲ್ಲ. ಆನಂತರ ನಮ್ಮ ಮನಸ್ಸಿನಲ್ಲಿದ್ದ ಆ ಪುಟ್ಟ ಮಗುವಿನ ಚಿತ್ರವನ್ನು ಭಂಗಪಡಿಸಿ ಈ ಹೊಸ ಚಿತ್ರವನ್ನು ಅಚ್ಚೊತ್ತಿಸಿಕೊಳ್ಳುತ್ತೇವೆ. ಇದೂ ಮುಂದೆ ಭಂಗಗೊಳ್ಳಬೇಕಾಗಿ ಬರುತ್ತದೆ ಎಂಬ ಎಚ್ಚರವಿರಬೇಕಷ್ಟೇ. ಇಲ್ಲದಿದ್ದರೆ ಕಲ್ಲಿನಲ್ಲಿ ಕೆತ್ತಿದ ನಿರ್ಜೀವ ವಿಗ್ರಹವಾಗುತ್ತೇವೆ. ಹಾಗೆಯೇ ಊರುಗಳ ವಿಷಯವೂ ಯಾವುದೋ ಕಾಲದಲ್ಲಿ ಅಚ್ಚೊತ್ತಿದ್ದ ಚಿತ್ರವನ್ನು ಅರಸುತ್ತಾ ಹೋದರೆ ಸಿಗುತ್ತದೆಯೇ? ಅಲ್ಲದೆ ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ಈ ಕಾಲಘಟ್ಟದಲ್ಲಿ ಎಲ್ಲವೂ 'ವೇಗ' ಎಂಬ ಬಿರುಗಾಳಿಗೆ ಸಿಕ್ಕ ತರಗೆಲೆಯಾಗುತ್ತಿದೆ. ಹಾಗಾದರೆ ಅಭಿವೃದ್ಧಿ ಎಂದರೆ ಕೇವಲ ಹೊರವಿನ್ಯಾಸದಲ್ಲಾಗುವ ವ್ಯತ್ಯಯವಷ್ಟೇನೆ? ಕೇವಲ ಹೊರ ವಿನ್ಯಾಸ ಕ್ಕೋಸ್ಕರ ನಾವು ನಮ್ಮದು ಎಂಬುದನ್ನೆಲ್ಲಾ ಕಳೆದುಕೊಳ್ಳಬೇಕೆ? ನಮ್ಮೊಂದಿಗೆ ಜೀವಿಸುವ ಉಪಕಾರಿ ಪಶು – ಪಕ್ಷಿಗಳನ್ನು ಕಡೆಗಣಿಸಿ, ಸಿಮೆಂಟು – ಕಾಂಕ್ರೀಟುಗಳನ್ನು ತುಂಬಿ ಶಾಶ್ವತವಾಗಿ ಪ್ರಕೃತಿಯ ಸೃಷ್ಟಿ ಶಕ್ತಿಯನ್ನೇ ನಾಶಪಡಿಸುವ ಮನುಷ್ಯ ಮತ್ತು ರಸ್ತೆ ಎಂಬ ರಾಕ್ಷಸದ್ವಯವನ್ನು ನಿಯಂತ್ರಿಸ ಬೇಡವೇ? ಹಾ. ಆಗಲೇ ಪುಟ್ಟ ಮಗುವಿನ ವಿಚಾರ ಪ್ರಸ್ತಾಪಿಸಿದ್ದೆ. ಅದರದ್ದೂ ಬೆಳವಣಿಗೆಯಲ್ಲವೇ? ಎಂದು ಪ್ರಶ್ನಿಸುತ್ತೀರಿ ಎಂದು ಗೊತ್ತು. ಆದರೆ ಮಗು ಸಹಜವಾಗಿ ವರ್ಧಮಾನಕ್ಕೆ ಬರುತ್ತಾ ತನ್ನ ಒಳ – ಹೊರಗುಗಳಲ್ಲಿ ಸಮಗ್ರ ವಾಗಿ ಬದಲಾಗುತ್ತಾ, ಸುಂದರ ರೂಪವನ್ನು ಪಡೆಯುತ್ತದೆ. ಕೇವಲ ಹೊರ ವಿನ್ಯಾಸದ ಏಕಮುಖ ಬೆಳವಣಿಗೆ ಅಥವಾ ಅಭಿವೃದ್ಧಿ ವಿಕಾರ ಸ್ವರೂಪವನ್ನು ಪಡೆಯುತ್ತದಲ್ಲವೇ? ಮತ್ತೆ ಮತ್ತೆ ರಸ್ತೆಯನ್ನು ಅಗಲೀಕರಿಸುತ್ತಾ ನಿಮ್ಮ ಮನೆಯನ್ನೇ ಒಡೆದು ರಸ್ತೆಗೆ ಬಿಟ್ಟುಕೊಟ್ಟರೆ ನಿಮ್ಮ ಊರಿನ ಸ್ವರೂಪವೆಲ್ಲಿ ಉಳಿಯತ್ತದೆ! ನಿಮ್ಮ ಊರು ಹೇಗಿದೆ ಎಂದು ಯಾರಾದರೂ ಕೇಳಿದರೆ ಬರೀ ರಸ್ತೆ – ಮಾರಾಟ ಮಳಿಗೆಗಳನ್ನು ವಿವರಿಸುತ್ತೀರಾ? ನೀವೆಲ್ಲಿ ಜೀವಿಸುತ್ತೀರಿ ಎಂದು ಕೇಳಿದರೆ 'ರಸ್ತೆಯಲ್ಲಿ' ಎಂದುತ್ತರಿಸುತ್ತೀರಾ? ಸದಾ ಕಾಲ ರಸ್ತೆಯಲ್ಲೇ ಸಂಚರಿಸುತ್ತಲೇ ಇದ್ದರೆ ಜೀವಿಸುತ್ತೀರೆಲ್ಲಿ? ತೊಡೆಯೇ ಮುರಿದು ಬಿದ್ದರೆ ದೇಹ ಯಾವುದರ ಮೇಲೆ ನಿಲ್ಲುತ್ತದೆ? ಹಾಗೆ ನೋಡಿದರೆ ರೈತನಾಗಿ ಪರಿವರ್ತನೆ ಗೊಂಡ ಮನುಷ್ಯ, ಪ್ರಾರಂಭದಲ್ಲಿ, ಕಾಡನ್ನು ಭಾಗಶಃ ನಾಶ ಮಾಡಿದರೂ ಪ್ರತಿ – ಪ್ರಕೃತಿಯನ್ನು ಸೃಷ್ಟಿಸುವ ನಿರಂತರ ಕಾಯಕದಲ್ಲಿ ತೊಡಗಿದ್ದು ತನಗೂ ಸಮಾಜಕ್ಕೂ ಅಗತ್ಯವಾದ ಆಹಾರವನ್ನು ಉತ್ಪಾದಿಸುತ್ತಾ ಸಮತೋಲನವನ್ನು ಕಾಪಾಡುತ್ತದೆ. ಅಂಥ ಒಂದು ಪರ್ಯಾಯವನ್ನು ಕಂಡುಕೊಳ್ಳಬೇಕಾದದ್ದು ಇಂದಿನ ಅಗತ್ಯವಲ್ಲವೇ? ಇಲ್ಲದಿದ್ದಲ್ಲಿ ಸಂಸ್ಕೃತ ಕನ್ನಡ ಎರಡೂ ಅರ್ಥದ ಊರು ಭಂಗ ನಡೆಯುತ್ತಲೇ ಇರುತ್ತದೆ.

*(ಸುಧಾ ಯುಗಾದಿ ವಿಶೇಷಾಂಕ 2015 ರ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಪ್ರಬಂಧ)*